


# ಮುಂಬೈ ರಕ್ಷಕಿ ಮುಂಬಾದೇವಿ

**ಬೆಂಗಳೂರಿಗೆ ಅಣ್ಣಮ್ಮ ದೇವತೆ ಇದ್ದಂತೆ ಮುಂಬಯಿಗೆ ಮುಂಬಾದೇವಿ. ಈ ದೇವಿಯ ಹೆಸರಿನ ಜೊತೆಗೇ ನಗರದ ಹೆಸರೂ ತಳಕು ಹಾಕಿಕೊಂಡಿದೆ. ಬಾಲಿವುಡ್ ಸೆಲೆಬ್ರಿಟಿಗಳೂ ಕಾರ್ಪೊರೇಟ್ ದಿಗ್ಗಜರೂ ಮುಂಬಾದೇವಿಯ ಭಕ್ತಸಮೂಹದಲ್ಲಿದ್ದಾರೆ. ಆದರೂ ಮುಂಬಯಿ ಪ್ರವಾಸಿ ನಕ್ಷೆಯಲ್ಲಿ ಈ ದೇವಿ ಅಷ್ಟೇನೂ ಪರಿಚಿತಳಲ್ಲ.**

**■ ಚೂಡಿ ಶಿವರಾಂ**

ಮುಂಬೈ – ಥಳುಕಿನ, ಗ್ಲ್ಯಾಮರ್ ಗ್ರಾಮರ್ ಅನ್ನು ಉಸಿರಾಡುವ ನಗರಿ. ಬಾಲಿವುಡ್ ತಾರೆಯರು, ವಿಶ್ವದ ಕೆಲವು ಶ್ರೀಮಂತ ಉದ್ಯಮಿಗಳು ನೆಲೆಗೊಂಡಿರುವ ಭಾರತದ ಆರ್ಥಿಕ ರಾಜಧಾನಿ. ವಲಸಿಗರ ಪಾಲಿಗೆ ದೇಶದಲ್ಲೇ ಈ ನಗರಿ ಆಯಸ್ಕಾಂತೀಯ ಗುಣ ಪಡೆದಿದೆ. ಸಣ್ಣ ಪುಟ್ಟ ಊರುಗಳಿಂದ ದೊಡ್ಡ ಕನಸುಗಳನ್ನು ಕಟ್ಟಿಕೊಂಡು ಇಲ್ಲಿಗೆ ಬರುವವರ ದಂಡೇ ಇದೆ. ಎಷ್ಟೋ ಸೆಲೆಬ್ರಿಟಿಗಳು ಚಿಕ್ಕಾಸೂ ಇಲ್ಲದೆ ಇಲ್ಲಿಗೆ ಬಂದು, ರಸ್ತೆಬದಿಯಲ್ಲಿ ಮಲಗಿ, ರೈಲ್ವೆ ಪ್ಲಾಟ್‌ಫಾರ್ಮ್‌ಗಳಲ್ಲಿ ಕಾಲ ಕಳೆದು ಆಮೇಲೆ ಜಾಕ್‌ಪಾಟ್ ಹೊಡೆದದ್ದೂ ಇದೆ. ಹಲವು ತಲೆಮಾರಿನವರು ಅಲ್ಪ ಸ್ವಲ್ಪ ಹಣವಿಟ್ಟುಕೊಂಡೋ ಅಥವಾ ಪುಡಿಗಾಸೂ ಇಲ್ಲದೆಯೋ ಇಲ್ಲಿಗೆ ಬಂದು ಯಶಸ್ವಿಯಾದ ಕಥೆಗಳ ಗುಚ್ಛವೇ ಮುಂಬೈನಲ್ಲಿದೆ.

ಹೀಗಿದ್ದೂ ಕೆಲವರಿಗಷ್ಟೇ ಮುಂಬಾದೇವಿ ಗೊತ್ತು. ಈ ದೇವತೆಯಿಂದಲೇ ನಗರಕ್ಕೆ 'ಮುಂಬೈ–ಮುಂಬಯಿ' ಹೆಸರು ಬಂದಿರುವುದು. ನಗರಿಯನ್ನು ನಿಗಾ ಮಾಡುತ್ತಾ, ರಕ್ಷಿಸುವವಳೇ ಈ ದೇವತೆ ಎಂಬುದು ಅಲ್ಲಿನವರ ನಂಬಿಕೆ.

ಏಷ್ಯಾದ ಅತಿ ದೊಡ್ಡ ಒಡವೆ ಮಾರುಕಟ್ಟೆ ಇರುವ ಜವೇರಿ ಬಜಾರ್‌ನ ಮಧ್ಯದಲ್ಲಿ ಮುಂಬಾದೇವಿ ದೇವಸ್ಥಾನವಿದೆ. ದೇಶಕ್ಕೆ ರಫ್ತಾಗುವ ಚಿನ್ನ ಹಾಗೂ ಕಚ್ಚಾ ವಜ್ರಗಳು ದೊಡ್ಡ ಮಟ್ಟದಲ್ಲಿ ಜವಾರಿ ಬಜಾರ್‌ಗೆ ಬರುತ್ತವೆ. ಜವಳಿ, ಉಕ್ಕು ಹಾಗೂ ಕಬ್ಬಿಣದ ಮಾರುಕಟ್ಟೆಯಿಂದಲೂ ದೇವಾಲಯ ಸುತ್ತುವರಿದಿದೆ. ಮಹಾರಾಷ್ಟ್ರದ ಅರ್ಥವ್ಯವಸ್ಥೆಗೆ ಮುಂಬೈ ಒಂದೇ ಶೇ. 87ರಷ್ಟು ಕಾಣಿಕೆ ಸಲ್ಲಿಸುತ್ತದೆ.

